ಕರ್ನಾಟಕ ವಿಧಾನ ಸಭೆ

ಗುರುವಾರ 29ನೇ ಮಾರ್ಚ್ 1984

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ವೀರಣ್ಣ) ಅಧ್ಯಕ್ಷ ಪೀಠದಲ್ಲಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿಮಾತಿನ ಉತ್ತರಗಳು

ವಿಷಯ : ಉಲ್ಲಾಳವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವುದು

ಪ್ರ. ಸಂಖ್ಯೆ 707 (1189) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).—ಮಾನ್ಯ ಪ್ರಚಾರ, ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಉಲ್ಲಾಳ ಮುಸ್ಲಿಮರ ಒಂದು ಪ್ರಸಿದ್ಧ ಯಾತ್ರಾ ಕೇಂದ್ರ ವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ವರ್ಷವಿಡೀ ಇಲ್ಲಿಗೆ ಬರುವ ಯಾತ್ರಾರ್ಥಿಗಳಿಗಾಗಿ ಮತ್ತು ಜಾತ್ರೆಗಳಲ್ಲಿ ವಿಶೇಷವಾಗಿ ಸೇರುವ ಅಲ್ಪಸಂಖ್ಯಾತರಿಗಾಗಿ ಉಲ್ಲಾಳವನ್ನು 1984-85ರ ಆರ್ಥಿಕ ವರ್ಷದಲ್ಲಿ ಪ್ರವಾಸೋದ್ಯಮ ಕೇಂದ್ರ ವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರದವರು ಭರವಸೆಯನ್ನು ನೀಡುವರೇ ?

ಶ್ರೀ ಎಂ. ರಘುಪತಿ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಯ ಮಂತ್ರಿಗಳು).—

ಅ) ಬಂದಿದೆ.

ಆ) ಇಲ್ಲ.

ಶ್ರೀ ಪಿ. ರಾಮಚಂದ್ರರಾವ್.—ಉಲ್ಲಾಳ ಒಂದು ಪ್ರಸಿದ್ಧವಾದ ಯಾತ್ರಾಸ್ಥಳವಾಗಿದೆ. ಇಲ್ಲಿ ನಡೆಯುವ ಜಾತ್ರಾ ಸಮಯದಲ್ಲಿ ಹಾಗೂ ಉರುಸ್ ಸಮಯದಲ್ಲಿ ಲಕ್ಷಾಂತರ ಜನ ಯಾತ್ರಾರ್ಥಿಗಳು ಬಂದು ಸೇರುತ್ತಾರೆ. ಇಲ್ಲಿ ಒಂದು ಸುಂದರವಾದಂಥ ಬೀಚ್ ಸಹ ಇದೆ. ಇಲ್ಲಿ ಪವಿತ್ರವಾದಂಥ ಒಂದು ದೇವಸ್ಥಾನ ಕೂಡ ಇದೆ. ಇಂತಹ ಸುಂದರ ಪ್ರದೇಶಕ್ಕೆ ಮಾನ್ಯ ಪ್ರವಾಸೋದ್ಯಮ ಮಂತ್ರಿ ಗಳು ಏತಕ್ಕೆ ಪ್ರೋತ್ಸಾಹ ಕೊಡಬಾರದು? ಬೇರೆ ಕಡೆಗಳಿಗೆ ಪ್ರೋತ್ಸಾಹ ಕೊಟ್ಟು ಇದನ್ನು ಕಡೆಗಣಿಸಲು ಕಾರಣವೇನು ?

ಶ್ರೀ ಎಂ. ರಘುಪತಿ.—ಬಹಳ ಜನರಿಗೆ ಒಂದು ತಪ್ಪು ಕಲ್ಪನೆ ಇದೆ. ಏನೆಂದರೆ, ಯಾತ್ರಾ ಸ್ಥಳಗಳು ಮತ್ತು ವಿಹಾರ ಸ್ಥಳಗಳು ಒಂದೇ ಎಂದು. ಆದರೆ ಯಾತ್ರಾ ಸ್ಥಳಗಳು ವಿಹಾರ ಸ್ಥಳಗಳಾ ಗುವುದಕ್ಕೆ ಸಾಧ್ಯವಿಲ್ಲ. ಬೇಕಾದರೆ ವಕ್ಫ್ ಬೋರ್ಡಿನವರ ಮೂಲಕ ಅಲ್ಲಿಗೆ ಬರುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ನಾಲ್ಕು ಕೊಠಡಿಗಳು ಇರುವಂತಹ ಅತಿಥಿ ಗೃಹಗಳನ್ನು ಕಟ್ಟಿಸಬಹುದು. ಅಲ್ಲಿ ಸಮುದ್ರತೀರ ಇರುವ ಕಾರಣದಿಂದ ಅದನ್ನು ಅಭಿವೃದ್ಧಿ ಪಡಿಸಬಹುದು ಎಂಬುದನ್ನು ನಾನು ಒಪ್ಪು ತ್ತೇನೆ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಮಾಡುವಾಗ ಈ ಒಂದು ಕಾರ್ಯಕ್ರಮವನ್ನು ಸಹ ಅದರಲ್ಲಿ ಅಳವಡಿಸುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು.—1388ನೇ ಪ್ರಶ್ನೆ. 1299ನೇ ಪ್ರಶ್ನೆ ಹಾಗೂ 1384ನೇ ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ವಿ. ಧನಂಜಯ ಕುಮಾರ್.—ಈ ಪ್ರಶ್ನೆಗಳನ್ನು ಯಾವಾಗ ತೆಗೆದುಕೊಳ್ಳಲಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ವಿವರಗಳು ಇನ್ನೂ ಬರದ ಕಾರಣ ಇವುಗಳನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಆಗಬಹುದು.

ವಿಷಯ : ಕೆ.ಎಸ್.ಆರ್.ಟಿ.ಸಿ. ನೌಕರರ ವಿರುದ್ಧ ಬಂದಿರುವ ದೂರಗಳು

ಪ್ರಶ್ನೆ ಸಂಖ್ಯೆ 711 (1722) ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು) ಮಾನ್ಯ ಸಾರಿಗೆ ರಾಜ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಾರ್ವಜನಿಕರಿಂದ 1981-82, 1982-83 ಮತ್ತು 83-84ನೇ ಸಾಲುಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಷ್ಟು ಜನರ ನೌಕರರ ವಿರುದ್ಧ ಅನುಚಿತ ವರ್ತನೆಯ ಬಗ್ಗೆ ಬಂದಿರುವ ದೂರುಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಬಗ್ಗೆ ಕೈಕೊಂಡಿರುವ ಕ್ರಮವೇನು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಮಂತ್ರಿಗಳು).—

ಅ) ಸಾರ್ವಜನಿಕರಿಂದ ಬಂದ ದೂರಗಳ ಸಂಖ್ಯೆ ಈ ಕೆಳಗೆ ಸೂಚಿಸಿದೆ

1981-82	....	538
1982-83	....	553
1983-84 (ಡಿಸೆಂಬರ್‌ವರೆಗೆ)		599

ದೂರುಗಳ ಸ್ವರೂಪದ ತೀವ್ರತೆಯನ್ನು ಅನುಸರಿಸಿ ಸಿಬ್ಬಂದಿಯ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಿ.ಜಿ. ಬಣಕಾರ್.—ರಾಜ್ಯದಲ್ಲಿರುವ ಎಲ್ಲ ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿ ಈ ಮೊದಲು ದೂರುಗಳ ಪೆಟ್ಟಿಗೆಗಳನ್ನು ಇಡುತ್ತಿದ್ದರು. ಸಾರ್ವಜನಿಕರು ಸಲಹೆ, ಸೂಚನೆ, ಹಾಗೂ ತಕರಾರುಗಳು ಏನಾದರೂ ಇದ್ದರೆ ಅರ್ಜಿಗಳನ್ನು ಬರೆದು ಅದರಲ್ಲಿ ಹಾಕುತ್ತಿದ್ದರು. ನಂತರ ಅವು ಡಿವಿಜನಲ್ ಕಂಟ್ರೋಲರ್ ಕಡೆಗೆ ಹೋಗುತ್ತಿದ್ದವು. ಅಲ್ಲಿ ಅವುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಯಾವ ಬಸ್‌ಗಳಲ್ಲಿಯೂ ಇಂತಹ ದೂರುಗಳ ಪೆಟ್ಟಿಗೆಗಳು ಕಾಣುತ್ತಿಲ್ಲ. ಪ್ರತಿ ಬಸ್‌ನಲ್ಲಿಯೂ ದೂರುಗಳ ಗೆಟ್ಟಿಗೆಗಳನ್ನು ಇಡಲು ತಾವು ಆದೇಶ ಕೊಡುತ್ತೀರೋ ಆಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಸದಸ್ಯರು ಮಾಡಿದಂಥ ಸಲಹೆ ಬಹಳ ಸೂಕ್ತವಾಗಿದೆ. ಅನೇಕ ಹಳೆಯ ಬಸ್‌ಗಳಲ್ಲಿ ದೂರುಗಳ ಪೆಟ್ಟಿಗೆಗಳು ಇವೆ. ಬೇರೆ ಬಸ್‌ಗಳಲ್ಲಿ ಇವು ಇಲ್ಲದಿದ್ದರೆ ಇಡ ಬೇಕೆಂದು ನಾನು ಆದೇಶ ಕೊಡುತ್ತೇನೆ. ಇದರ ಜೊತೆಗೆ ಸಾರ್ವಜನಿಕರಿಂದ ಬಂದಂಥ ದೂರುಗಳು ಯಾವುದೇ ರೀತಿಯಿಂದಲೂ ಮೆಡಲ್ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ.

ಪ್ರಶ್ನೆ 1308 (ಸದಸ್ಯರು ಹಾಜರಿಲ್ಲ).

ಪ್ರಶ್ನೆ 1516 (ಸದಸ್ಯರು ಹಾಜರಿಲ್ಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಪ್ರಶ್ನೆ 1552 ಇದು ನನ್ನ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಆದ್ದರಿಂದ ಇದನ್ನು ಯೋಜನಾ ಇಲಾಖೆಗೆ ವರ್ಗ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಮುಂದೆ ಇದಕ್ಕೆ ಯೋಜನಾ ಇಲಾಖಾ ಮಂತ್ರಿಗಳು ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು.—ಆಗಬಹುದು. ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಪ್ರಶ್ನೆ 1733 (ಸದಸ್ಯರು ಹಾಜರಿಲ್ಲ)

ಪ್ರಶ್ನೆ 1833 (ಸದಸ್ಯರು ಹಾಜರಿಲ್ಲ)

ವಿಷಯ : ಕಚ್ಚಾ ಅಲಂಕಾರ ಶಿಲೆಗಳು ರಾಜ್ಯದ ಯಾವ ಯಾವ ಕಲ್ಲಿನ ಗುಡ್ಡಗಳಿಂದ ಮತ್ತು ಗಣಿಗಳಿಂದ ತೆಗೆಯಲ್ಪಡುತ್ತಿರುವ ಕುರಿತು

ಪ್ರಶ್ನೆ ಸಂಖ್ಯೆ 717 (1605) ಶ್ರೀ ಎಂ. ಜಿ. ಜರತಾರ್‌ಗರ್ (ಹಂಬ್ಬಳ್ಳಿ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವೆರೆ ?

ಅ) 8-10 ಟನ್ ತೂಕದ ಕಲ್ಲುಗಳನ್ನು ಕಚ್ಚಾ ಅಲಂಕಾರ ಶಿಲೆಗಳು ರಾಜ್ಯದ ಯಾವ ಯಾವ ಕಲ್ಲಿನ ಗುಡ್ಡಗಳಿಂದಾ ಮತ್ತು ಗಣಿಗಳಿಂದ ತೆಗೆಯಲ್ಪಡುತ್ತವೆ ಹಾಗೂ ರಾಜ್ಯ ಸರ್ಕಾರಕ್ಕೆ ಗಣಿಗಳಿಂದ ಇದರಿಂದ ಬರುವ ರಾಜ ಧನವೆಷ್ಟು ;